ಅ) ಈ ವರ್ಷದಲ್ಲಿ ಈ ಕಟ್ಟಡದ ಶಂಕು ಸ್ಥಾಪನೆಯನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಲಾಗುವುದೇ ?

ಇ) ಈ ಯೋಜನೆಗೆ ಬೇಕಾದ ಹಣವೆಷ್ಟು ?

ಶ್ರೀ ಎಸ್.ಆರ್ ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ಕಾರ್ಮಿಕ ಸಚಿವರು.)—

ಅ) ಇತ್ತೀಚೆಗೆ ಅಂದರೆ, ಏಪ್ರಿಲ್ ೧೯೮೬ ರಲ್ಲಿ ಮಾತ್ರ ನಿವೇಶನವನ್ನು ಸ್ವಾಧೀನಕ್ಕೆ ಪಡೆಯಲು ಸಾಧ್ಯವಾಯಿತು. ಆದುದರಿಂದ, ಕಟ್ಟಡದ ಕಾರ್ಯ ಅಷ್ಟು ಪ್ರಗತಿದಾಯಕವಾಗಿಲ್ಲ.

ಆ) ಇದನ್ನು ಪರಿಶೀಲಿಸಲಾಗುವುದು.

ಇ) ಈ ಕಟ್ಟಡದ ನಕಾಶೆ ಮತ್ತು ಅಂದಾಜುಪಟ್ಟಿ ತಯಾರಿಸಿದ ನಂತರ ತಿಳಿಯುವುದು.

ಇನಾಮು ಜಮೀನುಗಳನ್ನು ಸಹಕಾರಿ ಅಥವಾ ಸರಕಾರಿ ಸಾಲಗಳನ್ನು ತೀರಿಸಲು ಮಾರಲು ಅನುಮತಿ ನೀಡುವ ಬಗ್ಗೆ

೮೧ (೪೧೯) ಶ್ರೀ ಪಿ.ಸಿ. ಸಿದ್ದನಗೌಡ (ಕಲಘಟಗಿ).—ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಇನಾಮು ಜಮೀನುಗಳನ್ನು ಸಹಕಾರಿ ಅಥವಾ ಸರಕಾರದ ಸಾಲ ತೀರಿಸಲು ಮಾರಲು ಅನುಮತಿ ನೀಡಲಾಗುವುದೇ ?

ಆ) ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಕಾಯ್ದೆಗೆ ತಿದ್ದುಪಡಿ ಮಾಡಿ ಈ ಸವಲತ್ತು ಕೊಡಲು ಸರಕಾರದ ವರು ಕ್ರಮ ಕೈಗೊಳ್ಳುವರೆ ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಮತ್ತು ಕಾರ್ಮಿಕ ಸಚಿವರು).—

ಅ) ಕರ್ನಾಟಕ (ಗ್ರಾಮಾಧಿಕಾರಿಗಳ ರದ್ದಿಯಾತಿ ಕಾಯ್ದೆ ೧೯೬೧ ಸೆಕ್ಷನ್ ೫(೩)ರನ್ವಯ ೭-೮-೭೮ ರಿಂದ ಸೇವಾ ಇನಾಂ ಜಮೀನುಗಳನ್ನು ೧೫ ವರ್ಷಗಳವರೆಗೆ ಪರಭಾರೆ ಮಾಡಲಂ ನಿರ್ಬಂಧಿಸಲಾಗಿದೆ. ಆದ್ದರಿಂದ ಜಮೀನುಗಳನ್ನು ಮಾರಲು ಅನುಮತಿ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಕಾಯ್ದೆಗೆ ಈ ಬಗ್ಗೆ ತಿದ್ದುಪಡಿ ಮಾಡುವ ಪ್ರಸ್ತಾವವು ಸರ್ಕಾರದ ಮುಂದೆ ಇರುವುದಿಲ್ಲ.

ಸರಕಾರಿ ನೀರಾವರಿ ಯೋಜನೆಗಳಿಗಾಗಿ ವಶಪಡಿಸಿಕೊಂಡಿರುವ ಜಮೀನುಗಳ ಕಿಮ್ಮತ್ತಿನ ಬಗ್ಗೆ

೮೨ (೧೦೭) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಕಂದಾಯ ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :

ಅ) ರಾಜ್ಯದಲ್ಲಿ ಕೆರೆಗಳ, ಅಣೆಕಟ್ಟುಗಳ ನಿರ್ಮಾಣಕ್ಕಾಗಿ ವಶಪಡಿಸಿಕೊಂಡಿರುವ ಒಟ್ಟಾರೆ ಜಮೀನಿನ ಕ್ಷೇತ್ರವೆಷ್ಟು ?

ಆ) ಸರಕಾರಿ ನಿಯಮಾವಳಿ ಪ್ರಕಾರ ಮಾಡಿರುವ ಜಮೀನುಗಳ ಕಿಮ್ಮತ್ತು ಎಷ್ಟು ?

ಇ) ನ್ಯಾಯಾಲಯಕ್ಕೆ ಹೋಗಿ ಜಮೀನುಗಳ ಕಿಮ್ಮತ್ತು ಹೆಚ್ಚು ಮಾಡಿ ಸರಕಾರದಿಂದ ಪಡೆದಿರುವ ಒಟ್ಟಾರೆ ಹಣದ ಮೊತ್ತವೆಷ್ಟು ?

ಈ) ಜಮೀನು ಸ್ವಾಧೀನತೆಗಾಗಿ ಪ್ರತಿ ಎಕರೆಗೆ ಕೊನೆ ಪಕ್ಷ ೧೦,೦೦೦ ರೂಪಾಯಿ ಬೆಲೆ ನಿಗದಿ ಮಾಡುವುದು ಹಾಗೂ ಜಮೀನು ಕಳೆದುಕೊಂಡವರಿಗೆ ಸರಕಾರಿ ನೌಕರಿಯಲ್ಲಿ ಕಡ್ಡಾಯವಾಗಿ ಸ್ಥಾನಗಳನ್ನು ಕಾಯ್ದಿರಿಸಲು ಕಾನೂನನ್ನು ಮಾಡುವುದು ಸರಕಾರದವರ ಪರಿಶೀಲನೆಯಲ್ಲಿದೆಯೇ ?

ಉ) ಕಾನೂನಿನ ಉಲ್ಲಂಘನೆ ಮಾಡಿ ಸರಕಾರದ ಸ್ವಾಧೀನದ ಜಮೀನುಗಳಲ್ಲಿ ಮರು ಸಾಗುವಳಿ ವಹಾಡುತ್ತಿರುವವರ ಮೇಲೆ ಕಾನೂನಿನ ಪ್ರಕಾರ ಕೈಗೊಳ್ಳುವ ಕ್ರಮವೇನು ?